ಕರ್ನಾಟಕದಲ್ಲಿ ಕನ್ನಡವೇ ಆಗಿರಬೇಕು. ಇತರ ಭಾಷೆಯವರಿಗೆ ಪ್ರೌಢಶಾಲಾ ಹಂತದವರೆಗೆ ಅವರ ಭಾಷೆಯ ಮೂಲಕವೇ ಕಲಿಯಲು ಅವಕಾಶವಿದ್ದರೂ, ಕನ್ನಡ ಭಾಷೆಯನ್ನು ಅವರಿಗೆ ಕಡ್ಡಾಯವಾಗಿ ಚೆನ್ನಾಗಿ ಕಲಿಸುವ ವ್ಯವಸ್ಥೆ ಇರಬೇಕು. ಕನ್ನಡನಾಡಿನಲ್ಲಿದ್ದು, ಕನ್ನಡನಾಡಿನ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಯನ ಮಾಡುವ ಯಾರಾದರೂ ಕನ್ನಡವನ್ನು ಕೈಬಿಡಲು ಸಾಧ್ಯವಾಗಬಾರದು. ಕನ್ನಡ ಕೇವಲ ಕಣ್ಣೊರೆಸುವ ಭಾಷೆಯಾಗಿ ಕಲಿಸಲ್ಪಡಬಾರದು.

ಈ ಸಾಮಾನ್ಯತತ್ವಕ್ಕೆ ಸರ್ಕಾರದ ಧೋರಣೆ ವಿರುದ್ಧವಾಗಿದೆ. ಕನ್ನಡ ಮಾಧ್ಯಮಕ್ಕೆ ಪ್ರೋತ್ಸಾಹ ಕೊಡುವುದು ಸರ್ಕಾರದ ಅಧಿಕೃತ ನೀತಿಯಾಗಿದ್ದರೂ, ಆ ದಿಕ್ಕಿನಲ್ಲಿ ಅದು ಯಾವ ಆಸಕ್ತಿಯನ್ನೂ ತಳೆದಿಲ್ಲ. ಪರೋಕ್ಷವಾಗಿ ಇಂಗ್ಲಿಷ್ ಮಾಧ್ಯಮದ ಶಾಲೆ ಕಾಲೇಜುಗಳಿಗೆ ಸರ್ಕಾರದ ಪ್ರೋತ್ಸಾಹ ಇದೆ. ಶಿಕ್ಷಣವನ್ನು ಲಾಭದಾಯಕ ಉದ್ಯಮವನ್ನಾಗಿಸಲು ಕರ್ನಾಟಕ ಸರ್ಕಾರ ಕಲ್ಪಿಸಿರುವಷ್ಟು ಅವಕಾಶವನ್ನು ಬಹುಶಃ ಬೇರೊಂದು ರಾಜ್ಯ ಸರ್ಕಾರ ಕಲ್ಪಿಸಿರಲಾರದು. ಶಿಶುವಿಹಾರಗಳನ್ನು ಇಂಗ್ಲಿಷ್ ಮಾಧ್ಯಮದಲ್ಲಿ ತೆರೆಯಲು ಸರ್ಕಾರ ಸಮ್ಮತಿ ನೀಡುತ್ತಿದೆ. ಈಚಿನ ವರ್ಷಗಳಲ್ಲಿ ಅಸಂಖ್ಯಾತ ಇಂಗ್ಲಿಷ್ ಮಾಧ್ಯಮದ ಶಾಲೆಗಳು ಆರಂಭವಾಗಿವೆ. ಎರಡು ಕಾರಣಗಳಿಂದ ಈ ಶಾಲೆಗಳು ಜನಪ್ರಿಯವಾಗಿವೆ: ಒಂದು ಸರ್ಕಾರ ನಡೆಸುವ ಶಾಲೆಗಳಿಗಿಂತ ಈ ಶಾಲೆಗಳಲ್ಲಿ ಉತ್ತಮ ಮಟ್ಟದ ಶಿಕ್ಷಣ ದೊರೆಯುತ್ತದೆ; ಇವು ಸುವ್ಯವಸ್ಥಿತ ಶಾಲೆಗಳು; ಶಿಸ್ತಿನಿಂದ ನಡೆಯುತ್ತವೆ. ಎರಡು, ಇಂಗ್ಲಿಷ್‌ನ ಪ್ರತಿಷ್ಠೆಗೆ ಜನರು ಕುರುಡರಾಗಿ ಹೋಗಿದ್ದಾರೆ. ನಮ್ಮ ಮಕ್ಕಳು ಏನಾಗುತ್ತಿವೆ. ಏನು ಕಲಿಯುತ್ತವೆ ಎಂಬುದನ್ನು ಪೋಷಕರು ಗಮನಿಸುವುದಿಲ್ಲ. ಇಂಗ್ಲಿಷ್ ಮಾಧ್ಯಮದಲ್ಲಿ ಓದುತ್ತವೆ ಎಂಬುದಷ್ಟೇ ಮುಖ್ಯ. ಆ ಮಕ್ಕಳು ಇಂಗ್ಲಿಷಿನ ಶಿಶುಪ್ರಾಸಗಳನ್ನು ತೊದಲುವಾಗ ಸ್ವರ್ಗಸಮೀಪರಾಗುವ ತಂದೆ ತಾಯಿಗಳನ್ನು ನಾನು ನೋಡಿ ಕನಿಕರಪಟ್ಟಿದ್ದೇನೆ. ತಮ್ಮ ಮಕ್ಕಳ ಭವಿಷ್ಯದಲ್ಲಿ ಎಲ್ಲ ತಂದೆ ತಾಯಿಗಳಿಗೂ ಆಸಕ್ತಿ ಇರುವುದು ಸಹಜ. ಆದ್ದರಿಂದ ಅವರು ಉತ್ತಮ ಮಟ್ಟದ ಶಾಲೆಗಳನ್ನು ಆರಿಸುವುದು ಸ್ವಾಭಾವಿಕ. ಇಂಗ್ಲಿಷ್ ಮಾಧ್ಯಮದ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳಿಸುವವರೆಲ್ಲ ಇಂಗ್ಲೀಷಿನ ಮೋಹದಿಂದಲೇ ಕಳಿಸುತ್ತಾರೆಂದು ಭಾವಿಸುವುದು ಸರಿಯಲ್ಲ. ಈ ಶಾಲೆಗಳು ಉತ್ತಮವಾಗಿವೆಯೆಂಬ ಭಾವನೆಯಿಂದ, ತಮಗೆ ಹತ್ತಿರವಾದ ಕನ್ನಡ ಶಾಲೆಗಳು ಇಲ್ಲದಿರುವುದರಿಂದ ಎಷ್ಟೋ ಸಲ ಅಸಹಾಯಕರಾಗಿ ಹಾಗೆ ಮಾಡಬೇಕಾಗುತ್ತದೆ. ನಗರಗಳಲ್ಲಿ ಅನೇಕ ವಿಸ್ತರಣಗಳಲ್ಲಿ ಕನ್ನಡ ಶಾಲೆಗಳೇ ಇರುವುದಿಲ್ಲ. ಶಿಕ್ಷಣವನ್ನು ಉದ್ಯಮವನ್ನಾಗಿಸುವವರು ಎಲ್ಲ ಕಡೆ ತಮ್ಮ ಶಾಲೆಗಳನ್ನು ಮೊದಲೇ ಆರಂಭಿಸುತ್ತಾರೆ. ಅಲ್ಲಿ ಶಾಲೆ ಆಗಲೆ ಇದೆ ಎಂಬ ನೆವದಿಂದ ಸರ್ಕಾರ ಶಾಲೆಗಳನ್ನು ತೆರೆಯುವುದಿಲ್ಲ. ಸರ್ಕಾರದ ಶಾಲೆಗಳ ಸ್ಥಿತಿಗತಿಗಳಂತೂ ಭಯಂಕರವಾಗಿವೆ; ತಮ್ಮ ಮಕ್ಕಳನ್ನು ಪ್ರೀತಿಸುವ ಯಾರೇ ಆದರೂ ಅವರನ್ನು ಈ ಶಾಲೆಗಳಿಗೆ ಕಳಿಸಲಾಗದಷ್ಟು ಕೆಟ್ಟುಹೋಗಿವೆ. ಖಾಸಗಿಯವರಿಗೆ ಕನ್ನಡ ಬೇಡ; ಸರ್ಕಾರಕ್ಕೆ ಒಳ್ಳೆಯ ಶಾಲೆಗಳನ್ನು ನಡೆಸುವ ಶಕ್ತಿಯಿಲ್ಲ. ಕನ್ನಡ ಉಳಿಯಬೇಕು ಹೇಗೆ? ಶಿಶುವಿಹಾರಗಳಿಂದ ತೊಡಗುವ ಈ ಇಂಗ್ಲಿಷ್ ಮಾಧ್ಯಮ ಹಾಗೆಯೇ ವಿಶ್ವವಿದ್ಯಾನಿಲಯ ಹಂತದವರೆಗೂ ನಡೆಯುತ್ತದೆ.

ಕನ್ನಡ ಮಾಧ್ಯಮದ ತರಗತಿಗಳನ್ನು ಪರಿಣಾಮಕಾರಿಯಾಗಿ ನಡೆಸುವುದರಲ್ಲಿ ಯಾರಿಗೂ ಮನಸ್ಸಿಲ್ಲ. ಕನ್ನಡ ಮಾಧ್ಯಮವನ್ನು ಆರಿಸಿಕೊಳ್ಳುವ ವಿದ್ಯಾರ್ಥಿಗಳಲ್ಲಿ ಕೀಳರಿಮೆ ಬೆಳೆಸಲಾಗುತ್ತಿದೆ. ಕನ್ನಡ ಮಾಧ್ಯಮದ ಸೆಕ್ಷನ್‌ಗಳು ಎ.ಬಿ. ಆಗಿರಲು ಸಾಧ್ಯವಿಲ್ಲ; ಅವು ಡಿ.ಎಫ್. ಗಳಾಗಿರುತ್ತವೆ. ಅಧ್ಯಾಪಕರು ಎ. ಎಂದರೆ ಆ್ಯಸ್ ಎನ್ನದೆ ಆ್ಯಪಲ್ ಎನ್ನುತ್ತಾರೆ; ಬಿ. ಎಂದರೆ